# ಸೆಕ್ಸ್ಟಿಂಗ್ ಎಂಬ ಸೈಬರ್ ಖೆಡ್ಡಾ

ಹಲವು ಸೈಬರ್ ಅಪರಾಧ ಪ್ರಕರಣಗಳಲ್ಲಿ ಹೆಚ್ಚಾಗಿ ಕೇಳಿಬರುತ್ತಿರುವ ಪದ 'ಸೆಕ್ಸ್ಟಿಂಗ್'. ಅರಿವಿದ್ದೋ ಇಲ್ಲದೆಯೋ ಸೆಕ್ಸ್ಟಿಂಗ್ ಎಂಬ ಖೆಡ್ಡಾಗೆ ಬಿದ್ದರೆ ಅದರಿಂದ ಹೊರಬರುವ ದಾರಿ ಸುಲಭವಾಗಿರುವುದಿಲ್ಲ.

■ ಪೃಥ್ವಿರಾಜ್



ತಮ್ಮೊಟ್ಟಿಗೆ ಕೆಲಸ ಮಾಡುತ್ತಿದ್ದ ಮಹಿಳೆಗೆ ಅಶ್ಲೀಲ ಮೆಸೇಜ್, ಫೋಟೊಗಳನ್ನು ಕಳುಹಿಸಿದ ಆರೋಪದ ಮೇಲೆ ಈಚೆಗೆ ಆಸ್ಟ್ರೇಲಿಯಾ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಟಿಮ್ ಪೈನೆ ರಾಜೀನಾಮೆ ನೀಡಬೇಕಾಯಿತು.

ಕೆಲವು ದಿನಗಳ ಹಿಂದೆ ದೆಹಲಿಯಲ್ಲೂ ಇಂಥ ಪ್ರಕರಣವೊಂದು ವರದಿಯಾಯಿತು. ಸಾಮಾಜಿಕ ಮಾಧ್ಯಮಗಳಲ್ಲಿ ಪರಿಚಯವಾದ ಯುವಕನೊಬ್ಬನಿಗೆ ವಿವಾಹಿತ ಮಹಿಳೆ ಅಶ್ಲೀಲ ಫೋಟೊಗಳು, ಮೆಸೇಜ್‌ಗಳನ್ನು ಕಳುಹಿಸಿದ್ದರು. ಇವರ ನಡುವಿನ ಚಾಟಿಂಗ್ ಬಹಿರಂಗವಾಗುತ್ತಿದ್ದಂತೆ, ಆ ಯುವಕನೊಂದಿಗೆ ಸೇರಿ ಆಕೆ ಅತ್ತೆ ಮನೆಯವರನ್ನು ಕೊಲೆ ಮಾಡಿದ್ದಳು.

ಈ ಎರಡೂ ಪ್ರಕರಣಗಳಲ್ಲಿ ಕೇಳಿಬಂದ ಪದ 'ಸೆಕ್ಸ್ಟಿಂಗ್'. ಈಚೆಗೆ ಈ ಪದ ಸೈಬರ್ ಕ್ರೈಂ ಪ್ರಕರಣಗಳಲ್ಲಿ ಹೆಚ್ಚಾಗಿ ಕೇಳಿಸತೊಡಗಿದೆ. ಸೆಕ್ಸ್ಟಿಂಗ್ ಎಂದರೇನು? ಸೆಕ್ಸ್ಟಿಂಗ್ ಅರ್ಥಾತ್ ಅಶ್ಲೀಲ ಮೆಸೇಜ್, ಫೋಟೊ, ವಿಡಿಯೊಗಳನ್ನು ಕಳುಹಿಸುವುದು ಶಿಕ್ಷಾರ್ಹ ಅಪರಾಧವೇ?

ಸೆಕ್ಸ್ ಮತ್ತು ಟೆಕ್ಸ್ಟಿಂಗ್ ಪದಗಳ ಮಿಲನವೇ 'ಸೆಕ್ಸ್ಟಿಂಗ್'. ಅಶ್ಲೀಲ ಮೆಸೇಜ್‌ಗಳು, ಚಿತ್ರಗಳು, ವಿಡಿಯೊಗಳನ್ನು ಇತರರಿಗೆ ಕಳುಹಿಸುವುದನ್ನೇ 'ಸೆಕ್ಸ್ಟಿಂಗ್' ಎನ್ನಲಾಗುತ್ತದೆ. ಸ್ಮಾರ್ಟ್‌ಫೋನ್‌ಗಳು ದಾಂಗುಡಿ ಇಡುವ ಮುನ್ನವೇ ಈ ಪದ ಮುನ್ನೆಲೆಗೆ ಬಂದಿತ್ತು.

2005ರಲ್ಲಿ ಆಸ್ಟ್ರೇಲಿಯಾದ ಟೆಲಿಗ್ರಾಫ್ ನಿಯತಕಾಲಿಕೆ ಪ್ರಕಟಿಸಿದ ಲೇಖನವೊಂದರಲ್ಲಿ ಈ ಪದ ಬಳಕೆಯಾಗಿತ್ತು. 2009ರಲ್ಲಿ 'ವರ್ಲ್ಡ್ ಆಫ್ ದಿ ಇಯರ್' ಎಂದು ನ್ಯೂ ಆಕ್ಸ್‌ಫರ್ಡ್ ಅಮೆರಿಕನ್ ನಿಘಂಟು ಈ ಪದವನ್ನು ಘೋಷಿಸಿತು. 2012ರಲ್ಲಿ ಮೆರಿಯಂ–ವೆಬ್‌ಸ್ಟೆರ್ ನಿಘಂಟಿನಲ್ಲೂ ಇದನ್ನು ಸೇರಿಸಲಾಯಿತು. ಬೇಸಿಕ್ ಮಾಡೆಲ್ ಮೊಬೈಲ್ ಫೋನ್‌ಗಳಲ್ಲಿ ಮೆಸೇಜಿಂಗ್ ಸೌಲಭ್ಯ ಬಳಕೆಗೆ ಬಂದ ಕೆಲವು ದಿನಗಳಲ್ಲೇ ಸೆಕ್ಸ್ಟಿಂಗ್ ಪದ ಕೇಳಿಸತೊಡಗಿತು. ಸ್ಮಾರ್ಟ್‌ಫೋನ್‌ಗಳು ಬಂದ ಮೇಲಂತೂ ಇದರ ಬಳಕೆ ಇನ್ನಷ್ಟು ಹೆಚ್ಚಾಯಿತು.

2009ರಲ್ಲಿ ಸ್ನಾಪ್ ಚಾಟ್ ನಡೆಸಿದ ಸಮೀಕ್ಷೆಯಲ್ಲಿ 14–17 ವರ್ಷದೊಳಗಿನ ಬಾಲಕ–ಬಾಲಕಿಯರು ಈ ರೀತಿಯ ಮೆಸೇಜ್ ಕಳುಹಿಸಿಕೊಂಡಿರುವುದು ತಿಳಿದುಬಂತು. ಭಾರತದ ಕಾನೂನಿನಲ್ಲಿ ಈ ಪದದ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸದಿದ್ದರೂ ನ್ಯಾಷನಲ್ ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್ ಬಿಡುಗಡೆ ಮಾಡಿದ 24 ಸೈಬರ್ ಅಪರಾಧಗಳ ಪಟ್ಟಿಯಲ್ಲಿ ಇದು ಕೂಡ ಸೇರಿದೆ.

ಲೈಂಗಿಕವಾಗಿ ಹಿಂಸಿಸುವ, ಉದ್ರೇಕಗೊಳಿಸುವ ಮೆಸೇಜ್, ಫೋಟೊ, ವಿಡಿಯೊಗಳನ್ನು ಮೊಬೈಲ್‌ಫೋನ್ ಅಥವಾ ಮೇಲ್ ಮೂಲಕ ಕಳುಹಿಸುವುದನ್ನು 'ಸೆಕ್ಸ್ಟಿಂಗ್' ಎಂದು ಸ್ಪಷ್ಟಪಡಿಸಲಾಗಿದೆ. ಸೆಕ್ಸ್ಟಿಂಗ್ ಮೂಲಕ ಮತ್ತೊಬ್ಬರಿಗೆ ತೊಂದರೆ ಕೊಟ್ಟರೆ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಅಪರಾಧವೆಂದು ಪರಿಗಣಿಸಿ ಶಿಕ್ಷಿಸುವ ಸಾಧ್ಯತೆಗಳಿವೆ ಎಂದು ತಜ್ಞರು ಹೇಳುತ್ತಾರೆ. ಇಬ್ಬರು ವ್ಯಕ್ತಿಗಳ ಪರಸ್ಪರ ಸಮ್ಮತಿಯಿಂದ ಇತರರಿಗೆ ತೊಂದರೆಯಾಗದಂತೆ ಸೆಕ್ಸ್ಟಿಂಗ್ ನಡೆದರೆ ಅದು ಅಪರಾಧವೆಂದು ಪರಿಗಣಿಸುವುದಿಲ್ಲ. ಆದರೆ ಇದರಿಂದ ಇತರರಿಗೆ ತೊಂದರೆಯಾದರೆ ಅದನ್ನು ಅಪರಾಧವಾಗಿ ಪರಿಗಣಿಸಲಾಗುತ್ತದೆ. ಒಪ್ಪಿಗೆ ಇಲ್ಲದೆ ಬೇರೊಬ್ಬರಿಗೆ ಈ ರೀತಿಯ ಟೆಕ್ಸ್ಟಿಂಗ್ ಮಾಡಿದರೆ ಅದು ಆ ವ್ಯಕ್ತಿಯ ಖಾಸಗಿ ಜೀವನಕ್ಕೆ ತೊಂದರೆ ಎಂದು ಪರಿಗಣಿಸಲಾಗುತ್ತದೆ.

## ಸೆಕ್ಸ್ಟಿಂಗ್ ಯಾಕೆ ಮಾಡುತ್ತಾರೆ?

ವಿವಾಹೇತರ ಸಂಬಂಧ, ಪರಸ್ಪರ ಪ್ರೀತಿ ಇದ್ದಾಗ, ಸಂಗಾತಿಯಿಂದ ದೂರವಿದ್ದು ಭೇಟಿಯಾಗಲು ಸಾಧ್ಯವಾಗದೇ ಇದ್ದಾಗ, ಹದಿಹರೆಯದವರಲ್ಲಿ ಚಿಗುರೊಡೆಯುವ ಆಸೆ, ಆಕಾಂಕ್ಷೆಗಳು... ಹೀಗೆ ಹಲವು ಕಾರಣಗಳು ಸೆಕ್ಸ್ಟಿಂಗ್‌ಗೆ ಕಾರಣವಾಗಬಹುದು. ಬಹುತೇಕ ಸಂದರ್ಭಗಳಲ್ಲಿ ಪರಸ್ಪರ ಒಪ್ಪಿಗೆಯಿಂದಲೇ ಇದು ನಡೆಯುತ್ತಿದೆ. ಇನ್ನೂ ಕೆಲವೊಮ್ಮೆ, ಹಲವರಿಗೆ ಒಬ್ಬರಿಗಿಂತ ಹೆಚ್ಚು ಜನರು ಇಷ್ಟವಾಗುತ್ತಾರೆ. ಅವರ ಮೇಲೆ ವ್ಯಾಮೋಹ ಮೂಡಿದರೆ, ಸಮಾಜ ಇಂತಹ ಸಂಬಂಧಗಳನ್ನು ಒಪ್ಪುವುದಿಲ್ಲ ಎಂದು ತಿಳಿದ ಮೇಲೆ ಇಂತಹ ಪರ್ಯಾಯ ಮಾರ್ಗಗಳ ಮೊರೆ ಹೋಗುತ್ತಾರೆ ಎಂಬುದು ತಜ್ಞರ ಅಭಿಪ್ರಾಯ.

ಆದರೆ ಇದರಿಂದಾಗುವ ಸಮಸ್ಯೆಗಳ ಪಟ್ಟಿ ದೊಡ್ಡದಿದೆ. ಇವೇ ಸಂದೇಶ, ಫೋಟೊ, ವಿಡಿಯೊಗಳನ್ನಿಟ್ಟುಕೊಂಡು ಹಣಕ್ಕಾಗಿ ಬೇಡಿಕೆ ಇಡುವ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿವೆ. ಕುಟುಂಬದವರಿಗೆ, ಪರಿಚಯಸ್ಥರಿಗೆ, ಇತರರಿಗೆ ಈ ಸಂದೇಶಗಳನ್ನು ಬಹಿರಂಗಪಡಿಸುವುದಾಗಿ ಬೆದರಿಕೆ ಒಡ್ಡಿ ತಮಗೆ ಬೇಕಾದ ಕೆಲಸಗಳನ್ನು ಮಾಡಿಸಿಕೊಳ್ಳುವುದು, ಹಣ ಪಡೆಯುವುದು, ಮಾನಸಿಕ ಹಿಂಸೆ ನೀಡುವಂಥ ವಿಕೃತಿಯ ಪ್ರಕರಣಗಳು ವರದಿಯಾಗುತ್ತಲೇ ಇವೆ.

ಸಾಮಾಜಿಕ ಮಾಧ್ಯಮಗಳ ಮೂಲಕ ಅಪರಿಚಿತರೊಂದಿಗೆ ಇಂತಹ ಸಲುಗೆ ಎಂದಿಗೂ ಅಪಾಯ ಎಂಬುದು ಪ್ರತಿ ಪ್ರಕರಣದಲ್ಲೂ ಸಾಬೀತಾಗುತ್ತಿದೆ. ಆರಂಭದಲ್ಲಿ ಟೆಕ್ಸ್ಟಿಂಗ್ ಚೆನ್ನಾಗಿದೆ ಎನಿಸಿದರೂ ಯಾವುದೇ ಕ್ಷಣದಲ್ಲಿ ಅಪಾಯಕ್ಕೆ ತಿರುಗಬಲ್ಲದು. ಇದಾಗ್ಯೂ, ಈ ಸಂಗತಿಯನ್ನು ನಿರ್ಲಕ್ಷಿಸಿ ತಾವು ಹೆಣೆದ ಬಲೆಗೆ ತಾವೇ ಸಿಲುಕಿಕೊಂಡು ಒದ್ದಾಡುವ ಪರಿಸ್ಥಿತಿ ಹಲವರದ್ದು.

ಪ್ರತಿಕ್ರಿಯಿಸಿ: feedback@sudha.co.in